ಉ) ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಸೌಕರ್ಯ ಒದಗಿಸಲು ಕ್ರಮ ಕಐಗೊಳ್ಳಲಾಗುತ್ತಿದೆ. ಹೆಚ್ಚುವರಿ ಅನುದಾನ ಲಭ್ಯವಿದ್ದಾಗ ಕ್ರಮಬದ್ಧವಾಗಿ ಉನ್ನತಶ್ರೇಣಿಗೆ ತರಲಾಗುವುದು.

ಮೈಸೂರು ಜಿಲ್ಲೆಯಲ್ಲಿ ಕೈಗೊಂಡಿರುವ ಹಜ್ ಯಾತ್ರೆ ಕುರಿತು

4609 (5367) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 ಸಾಲುಗಳಲ್ಲಿ ಮೈಸೂರು ಜಿಲ್ಲೆಯಲ್ಲಿ ಹಜ್ ಯಾತ್ರೆ ಕೈಗೊಂಡಿರುವವರ ಸಂಖ್ಯೆ ಎಷ್ಟು: (ತಾಲ್ಲೂಕುವಾರು ವಿವರ ಕೊಡುವುದು)

ಆ) ಈ ರೀತಿ ಹಜ್ ಯಾತ್ರೆಗೆ ಆಗಿರುವ ವೆಚ್ಚ ಎಷ್ಟು? ಸರ್ಕಾರದ ಪಾಲು ಎಷ್ಟು?

ಇ) ಹಜ್ ಯಾತ್ರೆಯನ್ನು ಕಡಿಮೆ ಖರ್ಚಿನಲ್ಲಿ ಹಾಗೂ ಕಡಿಮೆ ಕಾಲಾವಕಾಶದಲ್ಲಿ ಕೈಗೊಳ್ಳಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಈ) ಹಜ್‌ಯಾತ್ರೆ ಕೈಗೊಳ್ಳಲು ಸಾಧ್ಯವಾಗದ ಬಡಅಲ್ಪಸಂಖ್ಯಾತರು ಸಹಾ ಯಾತ್ರೆ ಕೈಗೊಳ್ಳುವಂತೆ ಮಾಡಲು ಸರ್ಕಾರ ಉದ್ದೇಶಿಸಿರುವ ಕ್ರಮ ಏನು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) 2001 : 341
2002 : 243
2003 : 168

ತಾಲ್ಲೂಕುವಾರು ವಿವರಗಳನ್ನು ಅನುಬಂಧ–Iರಲ್ಲಿ ನೀಡಲಾಗಿದೆ.

ಆ) ಹಜ್‌ಯಾತ್ರೆ ಕೈಗೊಳ್ಳಲು ಹಜ್ ಯಾತ್ರಿಕರೇ ಅವರ ಸ್ವತಃ ಖರ್ಚಿನಲ್ಲಿ ಭರಿಸಬೇಕಾಗುತ್ತದೆ. ಆದರೆ, ವಿಮಾನಯಾನ ಮಾಡಲು ಹಜ್ ಯಾತ್ರಿಕರಿಗೆ ಕೇಂದ್ರ ಸರ್ಕಾರವು ಸ್ವಲ್ಪಮಟ್ಟಿಗೆ ರಿಯಾಯಿತಿ ನೀಡುತ್ತಾರೆ. ರಾಜ್ಯ ಸರ್ಕಾರವು ಹೆಜ್‌ಯಾತ್ರಿಕರಿಗೆ ಯಾವುದೇ ಧನಸಹಾಯ ನೀಡುತ್ತಿಲ್ಲ. ಆದ್ದರಿಂದ ರಾಜ್ಯ ಸರ್ಕಾರದ ಪಾಲು ಏನೂ ಇರುವುದಿಲ್ಲ.

ಇ) ಹಜ್‌ಯಾತ್ರೆ ಕೈಗೊಳ್ಳಲು ತಗಲುವ ಖರ್ಚನ್ನು ಕೇಂದ್ರ ಹಜ್ ಸಮಿತಿ, ಮುಂಬೈ ರವರು ನಿಗದಿ ಪಡಿಸುತ್ತಾರೆ. ಹಾಗೂ ಕಾಲಾವಕಾಶದ ಬಗ್ಗೆ ಸೌದಿ ಅರೇಬಿಯಾ ಸರ್ಕಾರವು ನಿಗಧಿಪಡಿಸುತ್ತಾರೆ. ಆದ್ದರಿಂದ ರಾಜ್ಯ ಸರ್ಕಾರದ ಹಸ್ತಕ್ಷೇಪ ಈ ವಿಷಯದಲ್ಲಿ ಏನೂ ಇರುವುದಿಲ್ಲ.

ಈ) ಇಲ್ಲ. ಇಸ್ಲಾಮ ಧರ್ಮದ 5 ಮೂಲಭೂತ ತತ್ವಗಳಲ್ಲಿ ಹಜ್ ಯಾತ್ರೆ ಜೀವನದಲ್ಲಿ ಒಂದಾಗಿರುತ್ತದೆ. ಆದರೆ ಆರ್ಥಿಕವಾಗಿ ಹಿಂದುಳಿದವರಿಗೆ, ದೈಹಿಕವಾಗಿ ಹಾಗೂ ಮಾನಸಿಕವಾಗಿ ಸುಸ್ಥಿತಿಯಲ್ಲಿ ಇಲ್ಲದವರಿಗೆ ಹಜ್ ಯಾತ್ರೆ ಕಡ್ಡಾಯ ಇರುವುದಿಲ್ಲ.

ಮೈಸೂರು ಜಿಲ್ಲೆಯಲ್ಲಿ ವಕ್ಫ್ ಅನುದಾನ

4610 (5368) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ 3 (ಮೂರು) ಸಾಲುಗಳಿಂದ ಮೈಸೂರು ಜಿಲ್ಲೆಯಲ್ಲಿ ಬಿಡುಗಡೆ ಮಾಡಿರುವ ವಕ್ಫ್ ಅನುದಾನ ಎಷ್ಟು? (ತಾಲ್ಲೂಕುವಾರು ಮತ್ತು ವರ್ಷವಾರು ವಿವರ ಕೊಡುವುದು)

ಆ) ಈ ರೀತಿ ಬಿಡುಗಡೆಯಾದ ಅನುದಾನವನ್ನು ಯಾವ ಉದ್ದೇಶಗಳಿಗಾಗಿ ಬಳಸಲಾಗುತ್ತಿದೆ?

ಇ) ಅನುದಾನವನ್ನು ಬೇರೆ ಉದ್ದೇಶದಕ್ಕೆ ಬಳಸಿದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹೌದಾದರೆ ಈ ರೀತಿಯ ಪ್ರಕರಣ ಮರುಕಳಿಸದಂತೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಉ) ಮೈಸೂರು ಜಿಲ್ಲೆಯಲ್ಲಿ ವಕ್ಫ್ ಮಂಡಳಿ ಹೊಂದಿರುವ ಆಸ್ತಿಯ ಮೌಲ್ಯ ಎಷ್ಟು? ತಾಲ್ಲೂಕುವಾರು ವಿವರ ನೀಡುವುದು?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) – ಪಟ್ಟಿ ಲಗತ್ತಿಸಲಾಗಿದೆ –

ಆ) ಸರ್ಕಾರವು ಹಲವಾರು ವಕ್ಫ್ ಸಂಸ್ಥೆಗಳಿಗೆ ಅಂದರೆ, ಮಸೀದಿಗಳು, ಮದ್ರಸಾಗಳು ದರ್ಗಾಗಳು, ಖಬ್ರಸ್ಥಾನ ಮುಂತಾದವುಗಳಿಗೆ ಅವುಗಳ ನಿರ್ಮಾಣ ನಿರ್ವಹಣೆ, ಜೀರ್ಣೋದ್ಧಾರ, ತಂತಿ ಬೇಲಿ ಹಾಕಲು ಮುಂತಾದವುಗಳಿಗಾಗಿ ಅನುದಾನವನ್ನು ಮಂಜೂರು ಮಾಡುತ್ತದೆ. ಈ ಅನುದಾನವನ್ನು ಅಯಾಯಾ ವಕ್ಫ್ ಸಂಸ್ಥೆಗಳು ಸರ್ಕಾರ ಯಾವ ಉದ್ದೇಶಕ್ಕಾಗಿ ಮಂಜೂರು ಮಾಡುತ್ತದೋ ಆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳುತ್ತವೆ.

ಇ) ಮೈಸೂರು ಜಿಲ್ಲೆಯಲ್ಲಿ ಅನುದಾನವನ್ನು ಬೇರೆ ಉದ್ದೇಶಗಳಿಗೆ ಬಳಸಿಕೊಂಡಿರುವಂತಹ ಯಾವುದೇ ಪ್ರಕರಣ ಇಲ್ಲ

ಈ) – ಉದ್ಭವಿಸುವುದಿಲ್ಲ –

ಉ) ವಕ್ಫ್ ಆಸ್ತಿಗಳ ಮರು ಸರ್ವೆಯ ಕಾರ್ಯವು ಪ್ರಗತಿಯಲ್ಲಿ ಇದೆ. ಸರ್ವೆ ಕಾರ್ಯ ಪೂರ್ಣಗೊಳಿಸದೆ ವಕ್ಫ್ ಆಸ್ತಿಗಳ ಇತ್ತೀಚಿನ ಮೌಲ್ಯ ತಿಳಿಸುವುದು ಕಷ್ಟಕರ.

Statement Showing the year wise and Taluk wise Details of Government Grant Sanctioned to Wakfs of Mysore District For the Period From 2000-2001 To 2002-2003 (Three Years)

Sl.	Year	Name of the Taluk	No. of Institutions	Amount
01.	2000-01	Mysore	08	225000.00
		Hunsur	12	280000.00
		Nanjangud	03	95000.00
		Periyapatna	05	100000.00
		H.D. Kote	03	95000.00
		T. Narsipur	03	60000.00
		K.R. Nagar	10	200000.00
	2001-2002	Mysore	12	575000.00
		Hansur	01	50000.00
		Nanjangud	03	150000.00

Sl.	Year	Name of the Taluk	No. of Institutions	Amount
		Periyapatna	03	450000.00
		H.D. Kote	02	90000.00
		T. Narsipur	02	75000.00
	2002-2003	Mysore	23	1590000.00
		Hansur	02	55000.00
		Nanjangud	01	40000.00
		Periyapatna	12	410000.00
		H.D. Kote	07	175000.00
		T. Narsipur	01	25000.00

ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಕೆ.ಐ.ಎ.ಡಿ.ಬಿ. ಜಮೀನು ಮಾರಾಟ

4611 (5369) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಕೆ.ಐ.ಎ.ಡಿ.ಬಿ. ವಶಪಡಿಸಿಕೊಂಡ ಜಮೀನಿನ ಪ್ರಮಾಣ ಎಷ್ಟು ಅದನ್ನು ಎಷ್ಟು ಮಂದಿ ಕೈಗಾರಿಕೋದ್ಯಮಿಗಳಿಗೆ ಹಂಚಲಾಗಿದೆ.

ಆ) ಕೈಗಾರಿಕೆ ನಿಗದಿಪಡಿಸಿದ ಜಮೀನಿನಲ್ಲಿ ವಸತಿ ಕಟ್ಟಡಗಳನ್ನು ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ:

ಈ) ಈ ರೀತಿ ಕಾನೂನಿನ ವಿರುದ್ಧ ಕಟ್ಟಡ ನಿರ್ಮಾಣಕ್ಕೆ ಕಾರಣರಾದ ಅಧಿಕಾರಿಗಳು ಯಾರು.

ಈ) ಅವರುಗಳ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ವಶಪಡಿಸಿಕೊಂಡ ಜಮೀನಿನ ವಿಸ್ತೀರ್ಣ 1603 ಎಕರೆ ಭೂಸ್ವಾಧೀನ ಪಡಿಸಿ ಜಮೀನನ್ನು ಅಭಿವೃದ್ಧಿಪಡಿಸಿ 477 ಕೈಗಾರಿಕೆಗಳಿಗೆ ಯೋಜನೆಯನ್ನು ಕಾರ್ಯಗತಗೊಳಿಸಲು ಹಂಚಿಕೆ ಮಾಡಲಾಗಿದೆ.

ಆ) ಕೈಗಾರಿಕೆಗೆ ನಿಗದಿಪಡಿಸಿದ ಜಮೀನಿನಲ್ಲಿ ವಸತಿ ಕಟ್ಟಡಗಳನ್ನು ಕಟ್ಟಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ರಾಜ್ಯದಲ್ಲಿ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಯನ್ನು ಕುರಿತು

4612 (5165) : ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಬಿಡುಗಡೆಯಾದ ಹಣವೆಷ್ಟು: (ವರ್ಷವಾರು ವಿವರ ನೀಡುವುದು)